**ಎಂ.ವಿ.ಸಿ. 1223/2022, ಆರ್.ಡಬ್ಲೂ-1 ಹೆಸರುಃ ಮಂಜುನಾಥ**

**ದಿಃ22-04-2026 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲು: 1 ನೇ ಎದುರುದಾರರ ಪರ ಶ್ರೀ ಎಸ್.ಆರ್ ವಕೀಲರಿಂದಃ**

ಪೊಲೀಸ್ ದಾಖಲಾತಿಗಳ ಆಧಾರದಲ್ಲಿ ನಾನು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ. ನಾನು ತನಿಖಾಧಿಕಾರಿಗಳು ಸಲ್ಲಿಸಿರುವ ಎಲ್ಲಾ ದಾಖಲಾತಿಗಳ ಕುರಿತು ಪರಿಶೀಲನೆ ಮಾಡಿರುತ್ತೇನೆ. ತನಿಖಾಧಿಕಾರಿಗಳಿಗೆ ಎಲ್ಲಾ ಅರ್ಜಿದಾರರು ಹೇಳಿಕೆಗಳನ್ನು ನೀಡಿದ್ದಾರೆ ಎಂದರೆ ಸರಿ. ಎಲ್ಲಾ ಅರ್ಜಿದಾರರು ತಮ್ಮ ಹೇಳಿಕೆಯಲ್ಲಿ ಟೆಂಪೋ ಟ್ರಾವಲರ್ ಚಾಲಕನು ಅತೀ ವೇಗವಾಗಿ ವಾಹನವನ್ನು ಚಾಲನೆ ಮಾಡಿಕೊಂಡು ಹೋಗಿ ರಸ್ತೆಯ ಎಡಬದಿಯಲ್ಲಿ ನಿಲ್ಲಿಸಿದ್ದ ಟ್ರೈಲರ್‌ಗೆ ಡಿಕ್ಕಿಪಡಿಸಿರುತ್ತಾನೆ ಎಂದು ಹೇಳಿರುತ್ತಾರೆ ಎಂದರೆ ಸಾಕ್ಷಿ ರಸ್ತೆಯ ಮಧ್ಯದಲ್ಲಿ ನಿಲ್ಲಿಸಿದ್ದ ಟ್ರೈಲರ್‌ಗೆ ಡಿಕ್ಕಿಪಡಿಸಿರುವುದಾಗಿ ಹೇಳಿದ್ದಾರೆ ಎಂದು ನುಡಿಯುತ್ತಾರೆ.

2. ನಾನು ಕಚ್ಚಾ ನಕ್ಷೆಯನ್ನು ನೋಡಿರುತ್ತೇನೆ. ನಿಪಿ.3 ರ ಮಹಜರಿನಂತೆ ರಸ್ತೆಯ ಎಡಭಾಗದ ಅಂಚಿನಿಂದ ದಕ್ಷಿಣಕ್ಕೆ ಸುಮಾರು 6 ಅಡಿ ದೂರ ಇರುವ ಸ್ಥಳ ಕೃತ್ಯ ನಡೆದ ಸ್ಥಳ ಆಗಿರುತ್ತದೆ ಎಂದರೆ ಸರಿ. ಅಪಘಾತ ಏರ್ಪಟ್ಟ ಸ್ಥಳ ಶಿವಮೊಗ್ಗ - ಚಿತ್ರದುರ್ಗ

ಎನ್.ಹೆಚ್.13 ರ ಮುಖ್ಯ ರಸ್ತೆ ಎಂದರೆ ಸರಿ. ಸದರಿ ರಸ್ತೆ ಸುಮಾರು 30 ಅಡಿ ಅಗಲ ಇದೆ ಎಂದರೆ ಸರಿ. ಸದರಿ ರಸ್ತೆಯಲ್ಲಿ ಒಂದೇ ಕಾಲಕ್ಕೆ ಸುಮಾರು 4 ವಾಹನಗಳು ಹಾದುಹೋಗಬಹುದು ಎಂದರೆ ಸರಿಯಲ್ಲ. ಸದರಿ ರಸ್ತೆಯಲ್ಲಿ ರಸ್ತೆಯ ಎಡಭಾಗದಲ್ಲಿ ನಿಲ್ಲಿಸಿದ್ದ ಟ್ರೈಲರ್‌ಗೆ ಟೆಂಪೋ ಟ್ರಾವಲರ್ ಚಾಲಕ ಡಿಕ್ಕಿಪಡಿಸಿ ಅಪಘಾತ ಉಂಟುಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ.3 ರ ಕಚ್ಚಾ ನಕ್ಷೆಯಂತೆ ಕೃತ್ಯ ನಡೆದ ಸ್ಥಳ ರಸ್ತೆಯ ಎಡಭಾಗದ ಅಂಚಿನಿಂದ 6 ಅಡಿಗಳ ಅಂತರದಲ್ಲಿ ಇದೆ ಎಂದರೆ ಸರಿ.

3. ಅಪಘಾತದ ಸಮಯದಲ್ಲಿ ಟ್ರೈಲರ್‌ನ ಬಲಭಾಗದ ಚಕ್ರ ಪಂಚರ್ ಆಗಿತ್ತು ಎಂದರೆ ಸರಿ. ಸದರಿ ಟ್ರಾಕ್ಟರ್‌ನ ಚಾಲಕ ಬಲಭಾಗದ ಚಕ್ರವನ್ನು ಇಂಜಿನ್‌ನೊಂದಿಗೆ ತೆಗೆದುಕೊಂಡು ಪಂಚರ್ ಹಾಕಿಸಿಕೊಂಡು ಬರಲು ಹೋಗಿದ್ದರು ಎಂದರೆ ಸಾಕ್ಷಿ ನಿರ್ಲಕ್ಷತೆಯಿಂದ ಟ್ರೈಲರ್‌ನ್ನು ಬಿಟ್ಟು ಹೋಗಿದ್ದಾರೆ ಎಂದು ಹೇಳುತ್ತಾರೆ. ಅಪಘಾತದ ಸಮಯದಲ್ಲಿ ಟ್ರಾಕ್ಟರ್‌ನ ಇಂಜಿನ್ ಮತ್ತು ಚಾಲಕ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿ. ತನಿಖಾಧಿಕಾರಿಗಳು ತನಿಖೆಯನ್ನು ಸಮರ್ಪಕವಾಗಿ ನಡೆಸದೆ ಟ್ರಾಕ್ಟರ್‌ನ ಚಾಲಕನ ವಿರುದ್ಧ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ಟ್ರಾಕ್ಟರ್‌ನ ಚಾಲಕ ತನಿಖಾಧಿಕಾರಿಗಳು ಸಲ್ಲಿಸಿದ್ದ ದೋಷಾರೋಪಣ ಪಟ್ಟಿಯನ್ನು ರದ್ದುಪಡಿಸುವಂತೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಿದ್ದಾರೆ ಎಂದರೆ ಗೊತ್ತಿಲ್ಲ. ನಿಆರ್.4 ರಂತೆ ಟ್ರಾಕ್ಟರ್‌ನ ಚಾಲಕ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಿದ್ದು, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ಟ್ರಾಕ್ಟರ್ ಚಾಲಕನ ವಿರುದ್ಧದ ದೋಷಾರೋಪಣ ಪಟ್ಟಿಯನ್ನು ರದ್ದುಪಡಿಸಿರುತ್ತದೆ ಎಂದರೆ ಸರಿ. ನಿಆರ್.4 ರ 3 ನೇ ಖಂಡಿಕೆಯಂತೆ ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯವು ಆದೇಶಿಸಿರುತ್ತದೆ ಎಂದರೆ ಸರಿ. ಟೆಂಪೋ ಟ್ರಾವಲರ್ ವಾಹನ ಚಾಲಕ ಇದೇ ನ್ಯಾಯಾಲಯದಲ್ಲಿ ಇ.ಸಿ.ಎ.1/2023 ರಂತೆ ಅರ್ಜಿಯನ್ನು ಸಲ್ಲಿಸಿದ್ದಾರೆ ಎಂದರೆ ಸರಿ. ಸದರಿ ಅರ್ಜಿ ನ್ಯಾಯಾಲಯದಲ್ಲಿ ವಿಚಾರಣೆಗಾಗಿ ಬಾಕಿ ಇದೆ ಎಂದರೆ ಸರಿ. ಟೆಂಪೋ ಟ್ರಾವಲರ್ ವಾಹನದ ಜಖಂಗೊಂಡ ಕುರಿತಾಗಿ ನಮ್ಮ ವಿಮಾ ಕಾಂಪನಿಯಿಂದ ವಾಹನದ ದುರಸ್ತಿಗಾಗಿ ಪರಿಹಾರವನ್ನು ನೀಡಿರುತ್ತೇವೆ ಎಂದರೆ ಸರಿ.

4. ನಿಪಿ.5 ರ ದಾಖಲಾತಿಯಂತೆ ಕೆ.ಎ.17/ಟಿ-2681 ರ ಟ್ರೈಲರ್‌ನ ಬಲಭಾಗದ ಡೋರ್ ಜಖಂಗೊಂಡಿರುವ ಕುರಿತು ಉಲ್ಲೇಖ ಇದೆ ಎಂದರೆ ಸರಿ. ಕೆ.ಎ.04/ಡಿ-8153 ರ ಟೆಂಪೋ ಟ್ರಾವಲರ್ ವಾಹನಕ್ಕೆ ನಿಪಿ.5 ರಲ್ಲಿ ಉಲ್ಲೇಖಿಸಿರುವಂತೆ 9 ಜಖಂಗಳು ಏರ್ಪಟ್ಟಿರುತ್ತವೆ ಎಂದರೆ ಸರಿ. ಹಾಗಾಗಿ ಅಪಘಾತಕ್ಕೆ ಟೆಂಪೋ ಟ್ರಾವಲರ್ ವಾಹನದ ಚಾಲಕನ ಅತೀ ವೇಗ ಮತ್ತು ಅಜಾಗರೂಕತೆಯೇ ಕಾರಣ ಎಂದರೆ ಸರಿಯಲ್ಲ. 1 ನೇ

ಎದುರುದಾರರ ವಾಹನದ ಚಾಲಕನಿಗೆ ಸಂಬಂಧಿಸಿದಂತೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದೋಷಾರೋಪಣ ಪಟ್ಟಿಯನ್ನು ರದ್ದುಪಡಿಸಿರುವುದರಿಂದ 1 ನೇ ಎದುರುದಾರರು ಯಾವುದೇ ಪರಿಹಾರವನ್ನು ಪಾವತಿಸಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ಚಾಲಕನ ವಿರುದ್ಧ ಮಾತ್ರ ದೋಷಾರೋಪಣ ಪಟ್ಟಿಯನ್ನು ರದ್ದುಗೊಳಿಸಿದ್ದು, ವಾಹನದ ವಿರುದ್ಧ ದೋಷಾರೋಪಣ ಪಟ್ಟಿಯನ್ನು ರದ್ದುಗೊಳಿಸಿಲ್ಲ. ಚಾಲಕನಿಗೆ ಸಂಬಂಧಿಸಿದಂತೆ ದೋಷಾರೋಪಣ ಪಟ್ಟಿಯನ್ನು ರದ್ದುಪಡಿಸಿದ ನಂತರದಲ್ಲಿ ವಾಹನದ ಕುರಿತಾಗಿ ಯಾವುದೇ ಆರೋಪ ಉಳಿಯುವುದಿಲ್ಲ ಎಂದರೆ ಸರಿಯಲ್ಲ. ಅಪಘಾತದ ಸಮಯದಲ್ಲಿ ಟೆಂಪೋ ಟ್ರಾವಲರ್ ವಾಹನಕ್ಕೆ ವಿಮಾ ಪಾಲಿಸಿ ಚಾಲ್ತಿಯಲ್ಲಿತ್ತು ಎಂದರೆ ಸರಿ. ಸದರಿ ವಾಹನದ ಚಾಲಕನಿಗೆ ಚಾಲನಾ ಪರವಾನಗಿ ಇತ್ತು ಎಂದರೆ ಸರಿ. ಹಾಗಾಗಿ 3 ನೇ ಎದುರುದಾರರು ಎಲ್ಲಾ ಅರ್ಜಿದಾರರಿಗೂ ಪರಿಹಾರವನ್ನು ಪಾವತಿಸಲು ಬಾಧ್ಯಸ್ಥರಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ